Regd BG 155

(81) 2

30-4-1965

ಸತ್ಯವಾದಿ

48 th Year
Satyavadi
DAILY
MYSORE 4

ಸಂಸ್ಥಾಪಕರು – ಆರ್.ಸೆಷಾಸ್ತ್ರೀಯವರ್ ಎಂ ಎ ಸುಬ್ಬರಾಯುರು ಸಂಪಾದಕರು – ಧರ್ಮಪ್ರಭಾಕರ ಎಂ ಎಸ್ ಕೃಷ್ಣಾರಾವ್ 2 ಪೈಸೆ

ಪಾಂಕ್ರಮಿಕ ಪರಿಸ್ಥಿತಿ

ವೈದ್ಯಾಧಿ – ತಾ || 28 ರಲ್ಲಿ 17 ಅತಿಸಾರ ವಾಂತಿ ರೋಗಗ್ರಸ್ತರು ಇದ್ದು ಅಸ್ಪತ್ರೆಗೆ ಸೇರಿಸಲ್ಪಟ್ಟರು : ಕೃಷ್ಣರಾಜಪೇಟೆಗೆ ದಿಂದ ಬಂದ ಒಬ್ಬ ರೋಗಿಯ ವಿನಃ ಬಾಕಿಯೆಲ್ಲಾ ಸಾಧಾರಣ ಅತಿಸಾರ ವಾಂತಿ ಪ್ರಯೋಗಗಳು – ಸಾವುಗಳೇನೂ ಇಲ್ಲ (ಹಿಲ್ಲಾಧಿಕಾರಿಗಳ ವರದಿಯಿಂದ)

ಗೋಳೀಬಾರು

ಮಧುರೈ ಹತ್ತಿರ ಸೇಡಾಪಟ್ಟಿಯಲ್ಲಿ ಪಂಚಾಯತಿ ಅಧ್ಯಕ್ಷರು ಬರುತ್ತಿದ್ದುದನ್ನು ಅಡ್ಡಗಟ್ಟಿದ ಹತೋಟಿ ವಿರೋಧಿ ಗುಂಪಿನ ಮೇಲೆ ಪೋಲೀಸರು ಗುಂಡು ಹಾರಿಸಿದ ಪರಿಣಾಮ ಮೂರು ಮಂದಿ ಗಾಯಗೊಂಡರು

ಅಲ್ಜೀರ್ಸಿತ ವಾರ್ತೆಯಂತೆ ಯುಗೊಸ್ಲಾವಿಯ ಅಧ್ಯಕ್ಷ ಟೀಟೋ ಭಾರತ ಪ್ರಧಾನಿ ಶಾಸ್ತ್ರಿಗಳನ್ನು ಬೆಲ್ಗ್ರೇಡಿನಲ್ಲಿ ಶೀಘ್ರದಲ್ಲಿ ಕಾತರಿಂದಿದ್ದಾನೆ.

ರಂಗೂನುವಾರ್ತೆಯಿದು : ಪುಠಿದ ಹೆಸರಿನಲ್ಲಿ ರಾಜಕೀಯ ಮತ್ತು ಆರ್ಥಿಕ ವಿಷಯಗಳಲ್ಲಿ ನ್ಯಾಯಬಾಹಿರ ಚಟುವಟಿಕೆ ನಡೆಸಿದ ಅಪಾದನೆಗಾಗಿ 91 ಮಂದಿ ಬೌದ್ಧ ಸನ್ಯಾಸಿಗಳು ಬಂಧಿಸಲ್ಪಟ್ಟಿದ್ದಾರೆ

ಉತ್ತರ ವಿಯಟ್ನಾಮಿನಲ್ಲಿ ಅಮೇರಿಕಾ ವಿಮಾನಗಳನ್ನು ತಿಹೊಡೆದುರುಳಿಸಲು ರಷ್ಯಾ ಸಲಕರಣೆಗಳನ್ನು ಒದಗಿಸುತ್ತಿದಾಗಿ ರಷ್ಯಾ ಅಧಿಕಾರಿಯೊಬ್ಬರು ಹೇಳಿದ್ದಾರೆ

ಸಾಳೆಯ ಪಂಚಾಂಗ

ವೈವಜ್ಞ ಶಿರೋಮಣಿ
ಆಸ್ಥಾನಸಭಾವಿದ್ವಾನ್ ಧರ್ಮಾಧಿಕಾರಿ
ಲಂಜಕಾರಮ್ಯಾಪಕಕ್ಕ ಜ್ಯೋತಿರ್ವಿದ್ಯಾಸ್ಥಜೆ
ಸಂಪತ್ಕೃಷ್ಣಜೋಯಿಸಂಪಡಿಂದ
1 ಕನಿವಾರ ಅವಾವ್ಯಾಖ್ಯಿ ಶಕ್ತಿನಿ

ಶಾಂತಿ ನೆಲೆಸಲಿ

ಪಾಕಿಂಗ್ರೆಸ್ — ಕಚ್ ಭಾಗದ ತಂಡಗಳಲ್ಲಿ ಭಾರತ ಪಾಕಿಸ್ತಾನಗಳ ತೀವ್ರ ಹೊಡೆದಾಟದ ವಿಷಯವು ಅಮೇರಿಕಾ ಕೈಗೆತ್ತಿರುವುದೆಂದು ಅಧ್ಯಕ್ಷ ಜಾರ್ಜ್ ಹೇಳಿರುವುದು : ಅಲ್ಲಿ ಶಾಂತಿ ನೆಲೆಸಲು ಕರೆಯಿತ್ತಿರುವರು

ಹೊಂದೂಡದೇಕೆ

ನವದೆಹಲಿ — ಕಚ್-ಸಿಂಧ್ ಗಡಿ ಪರಿಸ್ಥಿತಿಯನ್ನು ನಿಸ್ಪೆ ಲೋಕಸಭೆ ಚರ್ಚಿಸಿ ಅಕ್ರಮಣಕಾರಿಯನ್ನು ಹೊಂದೂಡದೇಕೆಂದು ನಿರ್ಧರಿಸಲಾಯಿತು

ಸುಂಕ್ತಿಕವಾಗಿದೆ

ಜೋಡಿಪುರ — ಪಶ್ಚಿಮ ಪಾಕಿಸ್ತಾನ ಪೊಡನೆಯ ಪಂಜಾಬು ಗಡಿಯು ಜೆನ್ನಾಗಿ ಂಕ್ತಿಸಲಾಗಿದೆಯೆಂದು ಮುಖ್ಯ ಮಂತ್ರಿ ರಾವ್ ಕಿರ್ ಹೇಳಿದರು

ಸುಂಕ ಕಳ್ಳತನ

ನವದೆಹಲಿ — ದೇಶದಲ್ಲಿರುವ ಕಸ್ಟಮ್ಸು ಅಧಿಕಾರಿಗಳು ಹಾರ್ಡ್ ತಿಂಗಳಲ್ಲಿ ಸುಂಕ ಕೊಡದೆ ದೇಶದೊಳಗೆ ತರಲಾದ ಸುಮಾರು 50 ಲಕ್ಷ ರೂಗಳ ಬೆಲೆ ಬಾಳುವ ಚಿನ್ನ ಮತ್ತು ಇತರ ಸರಕುಗಳನ್ನು ವಶಪಡಿಸಿಕೊಂಡಿರುತ್ತಾರೆ

ರಷ್ಯಾದಿಂದ ಆಹಾರ !

ನವದೆಹಲಿ — ಸೋವಿಯತ್ ರಷ್ಯದಿಂದ ಪೆಟ್ರೋಲಿಯಂ ಪದಾರ್ಥಗಳನ್ನು ಮತ್ತು ದೇಶಕ್ಕೆ ಅವಶ್ಯವಿರುವ ವಿಷಯವಾಗಿ ಒಪ್ಪಂದವಾಗಿದೆ

ಸಮಾಂಧಕ್ಕೆ ಭಾರತ ಸಂಗೀತಗಾರರು

ಎಡಿನ್ಬರೋದ ಈ ವರ್ಷದ ಸಮಾಂಧದ್ಯ ಭಾರತದಿಂದ ಮೂವರು ಸಂಗೀತಗಾರರು ಹೋಗುವರು

ಕಂಜರಕೋಟೆ ಬಿಟ್ಟು

ಕದನ ಸ್ತಂಭ ಕೂಡದು

ಪಾಕಿಸ್ತಾನವು ಕಂಜರಕೋಟೆಯನ್ನು ಹೊಂದಿಂವವರೆಗೆ ಕಚ್‌ನಲ್ಲಿಯ ಯುದ್ಧಸ್ತಂಭ ಒಪ್ಪಂದವು ರಾಜಿಯಾಗಲ್ಪಡವುದಿಲ್ಲವೆಂದು ಪ್ರಧಾನಿ ಅಯ್ಯೂಬ್ ಕ್ಯಾಬಿನೆಟ್ ಮಂತ್ರಿಗಳು ಸ್ಪಷ್ಟವಾಹೇಳಿಕೆ ಕೊಡಬೇಕೆಂದು ಲೋಕಸಭೆಯಲ್ಲಿ ವಿರೋಧ ಪಕ್ಷದವರು ಕಾಗದ ಮಾಡಿದರು.

ತಂದೆಯ ಮಂತ್ರಿಮಂಡಲದಲ್ಲಿ ಮಗ

ಅಥೆನ್ಸ್ — ಪ್ರಧಾನಿ ಜಾರ್ಜ್ ಪಾಪೆಂಡ್ರಿಯೋ ಮಂತ್ರಿಮಂಡಲದಲ್ಲಿ 42 ವರ್ಷದ ಅವರ ಮಗ ಆಂಡ್ರೆಸ್ ಆರ್ಥಿಕ ಸಂಘಟನಾ ಮಂತ್ರಿಯಾಗಿ ಸೇರಿರುವನು.

ಪೋಲೀಸರಿಂದ ಕಳ್ಳತನ

ಮದರಾಸಿನಲ್ಲಿ ಫಾನುಜಾರಿ ರಾತ್ರಿ ಒಬ್ಬ ಗಮಾಸ್ತನನ್ನು ಹೆದರಿಸಿ ಅವನಲ್ಲಿದ್ದ ಹಣವನ್ನು ಕಿತ್ತುಕೊಂಡಿದ್ದಕ್ಕಾಗಿ 4 ಮಂದಿ ಪೋಲೀಸು ಪೇದೆಗಳು ಬಂಧಿಸಲ್ಪಟ್ಟಿರುವರು

ಅರ್ಧ ಜೋಕ

ಚಿನ್ನಮಂಗಳೂರಿನಲ್ಲಿ ಸಕ್ಕರೆ ಕೋಟ ಅರ್ಧಕ್ಕಿಳಿಸಲಾಗಿದೆ : ಡೊಡ್ಡವರಿಗೆ ತಿಂಗಳಿಗೆ ಒಂದು ಕಿಲೋ ಮಾತ್ರ (ಹೊರಡಿಸಿಯಾತ್ತಿದೆ.

ಜಾತ್ರೆ ನಿಂತಿತು

ಧರ್ಮಾವತಿ ತಾಲ್ಲೂಕು ಬೋಡ್ಡು ಅಶ್ವತ್ಥದಲ್ಲಿ ನಡೆಯುವ ಕೊಡ್ತಿ ಸಂಗಮೇಶ್ವರ ಜಾತ್ರೆಯು ತಾಲೂಕು ಪ್ರಮುಖರ ಈ ಸಾರಿ ನಿಲ್ಲಿಸಲ್ಪಟ್ಟಿದೆ

ಸಭಾ ಪರಿತ್ಯಾಗ

ಲಕ್ನೊ — ಸ್ವೀಕಾರ ಸರ್ವಾಧಿಕಾರ ರಕ್ಷಣೀತಿ ಅನುಸರಿಸುತ್ತಿರುವರೆಂದು ಎಸ್ಸೆಸ್ಪಿ ಸದಸ್ಯ ಶ್ರೀ ಕನ್ಹಲಾ ಸಿಂಗರು ಶಾಸನಸಭೆಯಿಂದ ಸಭಾ ಪರಿತ್ಯಾಗ ಮಾಡಿದರು

ದೇಶಭಕ್ತರು

ಲಡಖ್ನಲ್ಲಿರುವ ಸಿಕ್ ಜನಾಂಗದ ಯುವಕರು ಶತ್ರು ಭಾರತಕ್ಕೆ ಹೋಗಿ ಭಾರತ ರಕ್ಷಣೆಯಲ್ಲಿ ಭಾಗವಹಿಸಲು ಸಿದ್ಧವಿರುವುದಾಗಿ ಭಾರತ ಹೈಕಮಿಷನರಿಗೆ ತಿಳಿಸಿರುವರು

ಅಕ್ಕಿ ರಫ್ತು

ಟೋಕಿಯೋ — 1964 ರಲ್ಲಿ ವಿಶ್ವದ ಅಕ್ಕಿ ರಫ್ತು 900 ಮಿಲಿಯ ಪೌಂಡುಗಳಿಗೂ ಹೆಚ್ಚಾಗಿದ್ದಿತು

ಪ್ರವಾಸಿ ಸಚಿವಾಲಯ

ರಾಜ್ಯ ಸರಕಾರವು ಪ್ರವಾಸಿ ವಿಜಾರಕ್ಕೆ ಒಂದು ಸಚಿವಾಲಯ ಏರ್ಪಡಿಸಲಿ ಹೆಯೋ ಮೊನ್ನೆ ಹಾಸನದಲ್ಲಿ ಗೌರ್ನರು ಗರಿಯುವರು ಹೇಳಿದರು

ಜೀಪಾ ಪದಾರ್ಥಗಳು

ಲಕ್ನೊ — ಇಂಡೋ-ನೇಪಾಳ ಗಡಿಯಲ್ಲಿ ಉತ್ತರ ಪ್ರದೇಶದ ಪೂರ್ವ ಬೆಲ್ಟ್‌ಗಳಲ್ಲಿ ಜೀಪಾದ ಅಕ್ರಮ ಪದಾರ್ಥಗಳ ಪತ್ತಾಂತರ ನಡೆಯುತ್ತಿರುವ ಬಗ್ಗೆ ತನಿಖೆ ನಡೆಯಬೇಕೆಂದು ಶಾಸನಸಭೆಯಲ್ಲಿ ಕಾಂಗ್ರೆಸ್ ಸದಸ್ಯ ಶ್ರೀ ಪಾಂಡೆ ಹೇಳಿದರು

ದಾಂಪತ್ಯ ಧರ್ಮ

(ಮುಂದುವರಿದುದು)

ವಿವಾಹದ ಮಂತ್ರಗಳಲ್ಲಿ ಇಂತಹ ವೇದಶಾಖೆಯಲ್ಲಿಯೂ ವಿಯೋಗವನ್ನು ಹೇಳಿರುವುದಿಲ್ಲ ; ಮತ್ತು ವಿವಾಹವನ್ನು ಜೋಡಿಸುವ ಇಂತಹ ಶಾಸ್ತ್ರವಿಧಿಯಲ್ಲಿಯೂ ಆ ಶಾಸ್ತ್ರಕಾಂಡವು ವಿಚ್ಛೇದವಾದ ಸ್ತ್ರೀಗೆ ಪುನರ್ವಿವಾಹವನ್ನು ಹೇಳಿರುವುದಿಲ್ಲ.

ಕಾರಣ ಬೇರೆ ಕೆಲಸಕ್ಕಾಗಿ ಹೋಗಬೇಕಾದಾಗ ಸ್ತ್ರೀಯು ಊಟಕ್ಕಾಗಿ, ಮನೆಯಲ್ಲಿ ಸಾಮಗ್ರಿ ತಂದಿಟ್ಟು, ಪತಿಯು ದೇಶಾಂತರಕ್ಕೆ ಹೊರಗತಕ್ಕದ್ದು : ಏಕೆಂದರೆ ಶೀಲವತಿಯಾಗಿದ್ದರೂ ಸ್ತ್ರೀಯು ಅಸ್ವತಂತ್ರಾದಿಗಳಿಲ್ಲದಿದ್ದಕ್ಕೆ ವ್ಯಭಿಚಾರ ಮಾಡುವ ಸಂಭವವಿದೆ.

ಊಟಕ್ಕಾಗಿ ಊಟಕ್ಕಾಗಿ ಬೇಕಾದ ವಸ್ತುಗಳನ್ನು ಮನೆಯಲ್ಲಿಟ್ಟು ಪತಿಯು ದೇಶಾಂತರಕ್ಕೆ ಹೋದಾಗ, ಆ ಸ್ತ್ರೀಯು ತನ್ನ ದೇಹವನ್ನಲಂಕರಿಸಿಕೊಳ್ಳದೆ, ಮೈಮನಸಿಗೆ ಹೋಗದೆಯೂ ನಿಯಮವನ್ನು ಆಚರಿಸಿಕೊಂಡಿರತಕ್ಕದು : ಚೀವನಕ್ಕೆ ಮನೆಯಲ್ಲಿ ತಂದಿಡದೇ ಪತಿಯು ಹೋಗಿದ್ದರೆ, ನೂಲು ತೆಗೆಯುವುದೇ ಮುಂತಾದ ನಿಂದ್ಯವಲ್ಲದ ಶೈಗಾರಿಕೆಗಳಿಂದ ಜೀವಿಸಬೇಕು.

[ವಸುಸ್ಮೃತಿಯಿಂದ ಸಂಗ್ರಹಿಸಿದೆ] ಅ. ನ. ಅಯ್ಯಂಗಾರ್

ಹೊಂಗನೂರು ವಾರ್ತೆ

ತಾ|| 19 ರಂದು ಹೊಂಗನೂರು ಶಾಖಾ ಶಾಸ್ತ್ರಧರ್ಮ ಪ್ರಚಾರ ಸಭೆಯ 6 ನೇ ವಾರ್ಷಿಕೋತ್ಸವವು ನಡೆಯಿತು : ಪ್ರಾರಂಭದಲ್ಲಿ ಶ್ರೀ ಅನಂತಶಕ್ತಿ ನಾರಾಯಣಾವರಿಂದ ಸ್ವಸ್ತಿವಾಚನ, ಶ್ರೀ ವಿದ್ವಾನ್ ಸಂಜುಂಜಾಚಾರ್ಯರಿಂದ ದೇವತಾಪ್ರಾರ್ಥನೆ, ಶ್ರೀ ಹೊಂ. ಸು. ನಾರಾಯಣಂತಾರ್‌ರವರಿಂದ ಸ್ವಾಗತ ಭಾಷಣಗಳಾಯಿತು : ವಾರ್ಷಿಕೋತ್ಸವಕ್ಕೆ ಬೇರೆ ಸ್ಥಳಗಳಿಂದ ಬಂದಿದ್ದ ಸಂದೇಶಗಳನ್ನು ಶ್ರೀ ಅನಂತನಂಪಿಂಹಯ್ಯಂಗಾರ್ಯರು ಓದಿದರು : ನಂತರ ಶ್ರೀ ಹೆಚ್. ವಂದಂತಾಜಯ್ಯಂಪಾರ್ಯರಿಂದ 'ವಸ್ತ್ರಾಶ್ರಮಧರ್ಮ' ಎಂಬ ವಿಚಾರವಾಗಿಯೂ, ಶ್ರೀ ಅನಂತಪದ್ಮನಂಪಿಂಹಯ್ಯಂಗಾರ್ಯರಿಂದ 'ಶಾಸ್ತ್ರಧರ್ಮ ಪ್ರಚಾರಸಭಾ' ಎಂಬ ವಿಚಾರವಾಗಿಯೂ ಭಾಷಣಗಳಾದವು : ನಂತರ ಶ್ರೀ. ಅನಂತಸಕ್ಕನಾರಾಯಣಾವರು ವಸುಸ್ಮೃತಿಯ ಕೆಲವು ಶ್ಲೋಕಗಳನ್ನು ಓದಿದರು ; ಅಧ್ಯಕ್ಷ ಭಾಷಣವಾದನಂತರ ಸಭೆಯಲ್ಲಿ ನೆರೆದಿದ್ದವರೆಲ್ಲರೂ ವಸುಸ್ಮೃತಿಗೆ ಪುಷ್ಪಾಕ್ಷತೆಗಳಿಂದ ಪೂಜಿಸಿ ನಮಸ್ಕರಿಸಿ ಸಾಕ್ಷಾಯಂಭುವ ವಸುವಿಗೆ ಗೌರವ ಸಲ್ಲಿಸಿದರು ; ವಂದನಾರ್ಪಣೆ, ಮಂಗಳಾರತಿಗಳಾಗಿ ಸಮಾರಂಭ ಮುಕ್ತಾಯವಾಯಿತು : ಶ್ರೀ ಹೆಚ್. ವಂದಂತಾಜಯ್ಯಂಗಾರ್ಯರು ಅಧ್ಯಕ್ಷತೆ ವಹಿಸಿದ್ದರು.

ಂ ಂ ಂ

ತಾ|| 11 ರಿಂದ ಹೊಂಗನೂರು ತ್ರಿಮತಸ್ಥರ ರಾಮಮಂದಿರದಲ್ಲಿ ರಾಮಾಯಣ ಪಾರಾಯಣ ನಡೆಯುತ್ತಿದ್ದು ತಾ|| 19 ರಂದು ಪಟ್ಟಾಭಿಷೇಕ ನಡೆಯಿತು.

ಂ ಂ ಂ

ತಾ || 20 ರಂದು ಚಾಲಳ್ಳಿ ಶ್ರೀ ರಾಮ ಸೇವಾ ಸಂಪದವರು ರಾಮ ದೇವರ ಮೆರವಣಿಗೆ ನಡೆಸಿದರು

—0—

.... ನಾಳೆ ನೋಡಿ ಪ್ರಯುಕ್ತ ಶಕ್ತಿವಾಣಿ ಕಾರ್ಯಾಲಯಕ್ಕೆ ರಜವಿದೆ —

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಬ್ಬಾಗಿ ಪಡೆಯಲಿ

ವುಡ್‌ಲಾಂಡ್ ಜನಪ್ರಿಯತೆ 2 ನೇ ವಾರ

ಶಿ ನಿ

.... ಮನಮೋಹನ ಈಸ್ಟ್‌ಮನ್ ಕಲರ್ ಚಿತ್ರ ....

ಬಾಘಿ (ಹಿಂದಿ) BAGHI

ತಾರಾಗಣ— ಪ್ರದೀಪಕುಮಾರ್, ಲೀಲಾನಾಯ್ಡು, ಹೆಲೆನ್, ಜೀವನ್, ಅಜ್ಜಾನ್

ಪ್ರತಿದಿನ 3 ಪ್ರದರ್ಶನಗಳು

ಆಪೆರಾ—1 30—4—65 ರಿಂದ

ಅಮೋಘ ಈಸ್ಟ್‌ಮನ್ ಚಿತ್ರ — ಪ್ರತಿ 3 ಆಟಗಳು

ನವಜ್ಯೋತಿ [ಕನ್ನಡ]

ತಾರಾಗಣ— ರಾಜಕುಮಾರ್, ಉದಯಕುಮಾರ್, ಹಂಸಾ, ವೈ.ಜಿ.ವಿಷ್ಣುಕಾಲಕೃಷ್ಣ

SHAKTI

SUDHA

A Superb Tonic

Help The Gorakshana

★

"ಗೋರಕ್ಷಣ" ಕ್ಕೆ ಜೀವಾಳಿಗಳಾಗಿರಿ

ಶ್ರೀ ಧರ್ಮಶಾಸ್ತ್ರ ಜಗದ್ಗುರು ಮಹಾಶಾಸ್ತ್ರಿಯವರಿಗಳವರ ಆಜ್ಞಾನುಸಾರ ಸ್ಥಾಪಿಸಲ್ಪಟ್ಟ ಶಕ್ತಿವಾಣಿ ಕಾರ್ಯಾಲಯದವರು ಶಾಖಾಹಾರಿಗಳಾದ ಗೋರಕ್ಷಕರಿಗೆ, ಶಾಖಾಹಾರಿ ವೈದ್ಯರಿಗೆ ವಿಶೇಷವಾಗಿ ಕೊಡಿಸಿದ ವಿಶೇಷ ಸೌಲಭ್ಯ ಪಡೆಯಿರಿ.

ವಾರ್ಷಿಕ ಚಂದಾ 50 ನ್ಯೆಪೈ : ಗೋರಕ್ಷಣ ಕ್ಕೆ ಜೀವನಗಳನ್ನೂ ಪ್ರೋತ್ಸಾಹ ಧನವನ್ನೂ ತಂದಕಾಲೋಚಿತವಾಗಿ ಸ್ತ್ರೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

Edited, Printed & Published by the Proprietor
Dharma Prachara Nikata M S Krishna Rao
at the Satyavadi Press Chamarajapuram Mysore 4